ಅವರು ಸಮಸ್ಯೆಗೆ ವಿರುದ್ಧವಾಗಿಲ್ಲ. ಒಂದು ತಿಳಿವಾತಾವರಣವನ್ನು ಉಂಟು ಮಾಡಲು ಅವರನ್ನು ಕರೆಯಿಸಿ ಮಾತನಾಡಿದರೆ ತೊಂದರೆಯೇನೂ ಆಗುವುದಿಲ್ಲ. ಅವರು ರೈತರ ಪ್ರತಿನಿಧಿಗಳಾಗಿ ಕುಳಿತಿದ್ದಾರೆ. ಆದ್ದರಿಂದ ಮಾನ್ಯ ಸದಸ್ಯರನ್ನು ತಮ್ಮ ಛೇಂಬರ್‌ಗೆ ಕರೆಯಿಸಿ ಡಿಸ್‌ಕಸ್ ಮಾಡಿದರೆ ಒಳ್ಳೆಯದು. ಮಾನ್ಯ ಮುಖ್ಯಮಂತ್ರಿಗಳು ಸಮಸ್ಯೆಯ ಬಗ್ಗೆ ಸಮಾಧಾನ ಮಾಡಿದರೆ ಒಳ್ಳೆಯದು. ರೈತರ ಪರವಾಗಿ ಸಮಸ್ಯೆಯನ್ನು ಅವರು ಎತ್ತಿದ್ದಾರೆ. ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳುವುದು ಒಳ್ಳೆಯದೆಂದು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :– ತಾವು ಏನೂ ಹೇಳಲಿಲ್ಲ.

ಉಪಾಧ್ಯಕ್ಷಿಣಿಯವರು :– ನಾನು ಹೇಳುವುದು ಹೇಳಿದ್ದೇನೆ. ಸಭೆಯಲ್ಲಿ ತಾವು ಸಹ ರಿಕ್ವೆಸ್ಟ್ ಮಾಡಿಕೊಂಡಿರಿ. ಡೆಪ್ಯೂಟಿ ಲೀಡರ್ ರಿಕ್ವೆಸ್ಟ್ ಮಾಡಿಕೊಂಡಿದ್ದಾರೆ. ಈ ಕಡೆಯಿಂದಲೂ ರಿಕ್ವೆಸ್ಟ್ ಮಾಡಿಕೊಂಡಿದ್ದಾಗಿದೆ. ಸಭೆಯನ್ನು ನಡೆಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಎಲ್ಲರೂ ಕೇಳಿಕೊಂಡಿದ್ದು ಆಗಿದೆ.

ಶ್ರೀ ವಾಟಾಳ್ ನಾಗರಾಜ್ :– ಅನೇಕ ಸಾರಿ ಇಂಥ ಪ್ರಸಂಗಗಳು ಬಂದಾಗ ತಮ್ಮ ಕಾರ್ಯಾಲಯಕ್ಕೆ ಕರೆದು ಮಾತನಾಡಿರತಕ್ಕ ನಿದರ್ಶನಗಳು ಬೇಕಾದಷ್ಟು ಇವೆ. ಐದು ನಿಮಿಷ ಸಭೆಯನ್ನು ಮುಂದಕ್ಕೆ ಹಾಕಿ ಮಾತುಕತೆ ಆಡಿ ಒಂದು ತೀರ್ಮಾನಕ್ಕೆ ಬರಬಹುದು. ರೈತರ ಬಗ್ಗೆ ನಾವೆಲ್ಲರೂ ಒಂದೇ ತೀರ್ಮಾನಕ್ಕೆ ಬಂದಿದ್ದೇವೆ. ಎಲ್ಲರೂ ಒಮ್ಮತದಿಂದಿದ್ದೇವೆ. ಸಭೆಯಲ್ಲೂ ಒಮ್ಮತದ ತೀರ್ಮಾನವಾಗುತ್ತದೆಂದು ಅಂದುಕೊಂಡಿದ್ದೇವೆ. ತಮ್ಮ ನಾಯಕತ್ವದಲ್ಲಿ ಒಂದು ತೀರ್ಮಾನವಾಗಲಿ ಎಂದು ಮನವಿ ಮಾಡಿಕೊಳ್ಳುತ್ತೇನೆ.

ಒಬ್ಬ ಮಾನ್ಯ ಸದಸ್ಯರು :– ಧರಣಿ ಕುಳಿತುಕೊಳ್ಳುವುದು ಒಳ್ಳೆಯ ಸಂಪ್ರದಾಯವಲ್ಲ.

ಶ್ರೀ ಬಿ. ಎಚ್. ಬನ್ನಿಕೋಡು :– ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ ಮಾತು ಸಮಾಧಾನವಾಗಿಲ್ಲ. ತಾವು ತಮ್ಮ ಛೇಂಬರ್‌ನಲ್ಲಿ ಕರೆದು ಮಾತನಾಡಬೇಕು. ಐದು ನಿಮಿಷ ಸಭೆಯನ್ನು ಮುಂದಕ್ಕೆ ಹಾಕಿ ಈ ದಿಸೆಯಲ್ಲಿ ತಾವು ದಯವಿಟ್ಟು ದೊಡ್ಡ ಮನಸ್ಸು ಮಾಡಬೇಕು. ಧರಣಿ ಕುಳಿತಾಗ ಈ ರೀತಿ ಸಭೆಯನ್ನು ನಡೆಸಿಕೊಂಡು ಹೋಗುವುದು ಸರಿಯಲ್ಲ. ಅಧ್ಯಕ್ಷಣಿಯವರು ಸಭೆಯನ್ನು ಮುಂದಕ್ಕೆ ಹಾಕಬೇಕು.

ಡಾ॥ ಎಸ್. ಬಿ. ನಂಜಪ್ಪ :– ಈ ರೀತಿ ಪದೇ ಪದೇ ಧರಣಿ ಕುಳಿತುಕೊಳ್ಳುವುದು ಒಳ್ಳೆಯದಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ :– ಮಾನ್ಯ ವೆಂಕಟಪ್ಪನವರು ಕೇಳಿರುವುದಕ್ಕೆ ಉತ್ತರ ಹೇಳಿಬಿಡುತ್ತೇನೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :– ಸಾವಿರ ಸಾರಿ ಮನವಿ ಮಾಡಿದ್ದು ವಿಫಲವಾಯಿತು. ಧರಣಿ ನಡೆಯುತ್ತಿರುವಾಗ ಸಭೆಯನ್ನು ನಡೆಸುತ್ತಿರುವುದು ನನಗೆ ಒಪ್ಪಿಗೆ ಇಲ್ಲ. ಬಹಳ ನೋವಿನಿಂದ, ವೇದನೆಯಿಂದ ನಾನು ಸಭೆಯಿಂದ ಹೊರಗೆ ಹೋಗುತ್ತಿದ್ದೇನೆ. ಇದು ಸರಿಯಲ್ಲ, ನೀವು ಏನು ಬೇಕಾದರೂ ಮಾಡಿಕೊಳ್ಳಿ.

(ಮಾನ್ಯ ವಾಟಾಳ್ ನಾಗರಾಜ್ ಅವರು ಸಭಾತ್ಯಾಗ ಮಾಡಿದರು.)

(ಗೊಂದಲ)

ಶ್ರೀಮತಿ ಕೆ, ಎಸ್. ನಾಗರತ್ನಮ್ಮ :– ವೆಂಕಟಪ್ಪನವರು ಹಂದಿಗಳನ್ನು ಬೇರೆ ಕಡೆ ಇರಿಸಬೇಕೆಂದರು.

ಶ್ರೀ ಎಲ್. ಆರ್. ಶಿವರಾಮೇಗೌಡ :– ನಾವು ಕೇಳುತ್ತೇವೆ, ನಾವು ಕೇಳಿದ ಮೇಲೆ ಉತ್ತರ ಹೇಳಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ :– ಒಂದು ಪ್ರಶ್ನೆಗೆ ಉತ್ತರ ಆದ ಮೇಲೆ, ಆದನ್ನು ಬಿಟ್ಟು ಬೇರೆ ಏನಾದರೂ ಇದ್ದರೆ ಕೇಳಿ.

ಉಪಾಧ್ಯಕ್ಷಿಣಿಯವರು :– ಶಿವರಾಮೇಗೌಡರೆ, ನಿಮಗೂ ಅವಕಾಶ ಕೊಡುತ್ತೇನೆ, ಕುಳಿತುಕೊಳ್ಳಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ :– ಹಂದಿಗಳನ್ನು ಬೇರೆ ಕಡೆ ಇರಿಸಬಾರದೆ ಎಂದು ಕೇಳಿದರು. ಆ ಬಗ್ಗೆ ವಿಚಾರಿಸಿದಾಗ ರೈತರು ಏನು ಹೇಳಿದರೆಂದರೆ, ಸರ್ಕಾರದವರು ಸಾಲ ಕೊಡುತ್ತಾರೆ, ಬ್ಯಾಂಕಿನವರು ಸಾಲ ಕೊಡುತ್ತಾರೆ, ನಾವು ಹಂದಿಗಳನ್ನು ಸಾಕುತ್ತೇವೆ. ಬೇಕಾದಲ್ಲಿ ಇರಿಸುತ್ತೇವೆ. ಆ ಬಗ್ಗೆ ನೀವು ಯಾರು ಕೇಳುವುದಕ್ಕೆ ಎಂದು ಅಧಿಕಾರಿಗಳಿಗೆ ಒರಟಾಗಿ ಹೇಳುತ್ತಾರೆ. ಇದಕ್ಕೆ ಎಲ್ಲರ ಸಹಕಾರ ಬೇಕು. ಮಕ್ಕಳಿಗೆ ಜ್ವರ ಬಂದು ಇದ್ದಕ್ಕಿದ್ದ ಹಾಗೆ ಮರಣ ಹೊಂದುವದು ನೋಡಿದರೆ ಬಹಳ ದುಃಖವಾಗುತ್ತದೆ. ಆದರೆ ಇವರು ಸರ್ಕಾರ ಸಹಾಯ ಮಾಡಿದೆ ಹಂದಿ ತೆಗೆದುಕೊಂಡಿದ್ದೇವೆ, ನಾವು ಮನೆಯಲ್ಲೇ ಇಟ್ಟುಕೊಳ್ಳುತ್ತೇವೆಂದು ಜವಾಬು ಕೊಟ್ಟರೆ ಅಧಿಕಾರಿಗಳು ಕೆಲಸ ಮಾಡುವುದು ಕಷ್ಟವಾಗುತ್ತದೆ. ಈ ದಿಸೆಯಲ್ಲಿ ಎಲ್ಲರ ಸಹಕಾರ ಇದ್ದರೆ ಹಂದಿಗಳನ್ನು ಬೇರೆ ಇರಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.